ವಿಷಯ:- ಭಾರತ ಸರ್ವೋಚ್ಛ ನ್ಯಾಯಾಲಯದಲ್ಲಿ ಕರ್ನಾಟಕ ಸರ್ಕಾರದಿಂದ ದಾಖಲಿಸಲಾಗಿರುವ ಸ್ಪೆಷಲ್ ಲೀವ್ ಪಿಟಿಷನ್ (ಸಿವಿಲ್) ಸಂಖ್ಯೆ:36462/2011ರ ಸಂಬಂಧ ಶ್ರೀ ಸಿ. ಜಗದೀಶ್, ವಿಶೇಷ ನ್ಯಾಯವಾದಿ ಇವರನ್ನು ದೆಹಲಿಗೆ ನಿಯೋಜಿಸುವ ಬಗ್ಗೆ.

ಓದಲಾಗಿದೆ:- 1) ಸರ್ಕಾರಿ ಆದೇಶ ಸಂಖ್ಯೆ: ಸಕಇ 187 ಎಸ್‌ಎಡಿ 2010 ದಿ:17-09-2011

2) ಸರ್ಕಾರಿ ಆದೇಶ ಸಂಖ್ಯೆ: ಸಕಇ 187 ಎಸ್‌ಎಡಿ 2011(ಭಾಗ) ದಿ:21-11-2011

3) ಶ್ರೀ ಸಿ. ಜಗದೀಶ್, ವಿಶೇಷ ವಕೀಲರು, ಸಮಾಜ ಕಲ್ಯಾಣ ಇಲಾಖೆ, ಇವರ ಪತ್ರ ದಿನಾಂಕ: 12-11-2013

*****

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರಲ್ಲಿನ ದಿನಾಂಕ: 17-09-2011ರ ಸರ್ಕಾರಿ ಆದೇಶದಲ್ಲಿ ರಿಟ್ ಅರ್ಜಿ ಸಂಖ್ಯೆ:11756/2010ರಲ್ಲಿ ಕರ್ನಾಟಕ ಉಚ್ಛನ್ಯಾಯಾಲಯವು ದಿನಾಂಕ: 29-06-2011 ರಂದು ನೀಡಿದ ತೀರ್ಪಿನ ವಿರುದ್ಧ ಭಾರತ ಸರ್ವೋಚ್ಛ ನ್ಯಾಯಾಲಯದಲ್ಲಿ ವಿಶೇಷ ಮೇಲ್ಮನವಿ ದಾಖಲಿಸುವ ಸಲುವಾಗಿ ಶ್ರೀ ರಘುಪತಿ, ಅಡ್ವೊಕೇಟ್ ಆನ್ ರೆಕಾರ್ಡ್, ಭಾರತ ಸರ್ವೋಚ್ಛ ನ್ಯಾಯಾಲಯ, ನವದೆಹಲಿ ಇವರನ್ನು ಅಧಿಕೃತಗೊಳಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರಲ್ಲಿನ ದಿನಾಂಕ:21-11-2011ರ ಸರ್ಕಾರಿ ಆದೇಶದನ್ವಯ ಶ್ರೀ ಸಿ. ಜಗದೀಶ್, ವಿಶೇಷ ನ್ಯಾಯವಾದಿ, ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ಹಾಗೂ ಶ್ರೀ ಶ್ರೀಧರ್ ಆರ್. ಸಹಾಯಕ ನಿರ್ದೇಶಕರು, ಆಯುಕ್ತರು ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು, ಇವರುಗಳು ನವದೆಹಲಿಗೆ ತೆರಳಿ ಭಾರತ ಸರ್ವೋಚ್ಛ ನ್ಯಾಯಾಲಯದಲ್ಲಿ ಕರ್ನಾಟಕ ಸರ್ಕಾರದ ಪರವಾಗಿ ಸ್ಪೆಷಲ್ ಲೀವ್ ಪಿಟಿಷನ್ (ಸಿವಿಲ್) ಸಂಖ್ಯೆ: 36462/2011ನ್ನು ದಿನಾಂಕ: 30-11-2011ರಂದು ದಾಖಲಿಸಿರುತ್ತಾರೆ. ಸದರಿ ಸ್ಪೆಷಲ್ ಲೀವ್ ಪಿಟಿಷನ್ (ಸಿವಿಲ್) ರಲ್ಲಿನ ಕಚೇರಿ ಆಕ್ಷೇಪಣೆಗಳನ್ನು ದಿನಾಂಕ: 03-12-2011ರಂದು ತೆಗೆಸಿ ಸದರಿ ಪ್ರಕರಣವನ್ನು ದಿನಾಂಕ: 16-12-2011 ರಂದು ವಿಚಾರಣೆಗೆ ತರಲು ಕ್ರಮವಹಿಸಿರುತ್ತಾರೆ. ಸದರಿ ಸ್ಪೆಷಲ್ ಲೀವ್ ಪಿಟಿಷನ್ (ಸಿವಿಲ್)ನಲ್ಲಿ ದಿನಾಂಕ: 16-12-2011 ರಂದು ಭಾರತ ಸರ್ವೋಚ್ಛ ನ್ಯಾಯಾಲಯದಲ್ಲಿ ತಡೆಯಾಜ್ಞೆಯನ್ನು ಪಡೆಯಲಾಗಿರುತ್ತದೆ.

ಶ್ರೀ ಸಿ. ಜಗದೀಶ್, ವಿಶೇಷ ನ್ಯಾಯವಾದಿ, ಸಮಾಜ ಕಲ್ಯಾಣ ಇಲಾಖೆ, ಇವರು ಮೇಲೆ ಓದಲಾದ ಕ್ರಮ ಸಂಖ್ಯೆ: (3)ರ ಪತ್ರದಲ್ಲಿ ಸದರಿ ಪ್ರಕರಣವು ದಿನಾಂಕ: 18-11-2013 ರಂದು ಸರ್ವೋಚ್ಛ ನ್ಯಾಯಾಲಯದಲ್ಲಿ ವಿಚಾರಣೆಗೆ ಬರುತ್ತಿರುವುದರಿಂದ ಅವರನ್ನು ನವದೆಹಲಿಗೆ ಹೋಗಿಬರಲು ನಿಯೋಜಿಸುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ: ಸಕಇ 204 ಎಸ್‌ಎಡಿ 2011 ಬೆಂಗಳೂರು, ದಿನಾಂಕ: 16-11-2013**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಭಾರತ ಸರ್ವೋಚ್ಛ ನ್ಯಾಯಾಲಯದಲ್ಲಿ ಕರ್ನಾಟಕ ಸರ್ಕಾರವು ದಾಖಲಿಸಿರುವ ಸ್ಪೆಷಲ್ ಲೀವ್ ಪಿಟಿಷನ್ (ಸಿವಿಲ್) ಸಂಖ್ಯೆ: 36462/2011ರ ಬಗ್ಗೆ ಪ್ರತಿನಿಧಿಸಲು ಶ್ರೀ ಸಿ. ಜಗದೀಶ್, ವಿಶೇಷ ನ್ಯಾಯವಾದಿ, ಕರ್ನಾಟಕ ಸರ್ಕಾರ, ಬೆಂಗಳೂರು ಇವರು ದಿನಾಂಕ: 15-11-2013 ರಂದು ಬೆಂಗಳೂರಿನಿಂದ ನವದೆಹಲಿಗೆ ವಿಮಾನದಲ್ಲಿ ಹೋಗಿ ದಿನಾಂಕ: 22-11-2013 ರಂದು ನವದೆಹಲಿಯಿಂದ ಬೆಂಗಳೂರಿಗೆ ವಿಮಾನದಲ್ಲಿ ಹಿಂದಿರುಗಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಸದರಿ ಪ್ರಯಾಣದ ವೆಚ್ಚವನ್ನು ವ್ಯವಸ್ಥಾಪಕ ನಿರ್ದೇಶಕರು, ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಂಗಳೂರು ಇವರು ನಿರ್ವಹಿಸತಕ್ಕದ್ದು. ಅಂತೆಯೇ, ಸದರಿಯವರೊಂದಿಗೆ ತಕ್ಷಣವೇ ಸಂಪರ್ಕಿಸಿ ಪ್ರಯಾಣ ಇನ್ನಿತರೆ ವಿಚಾರದಲ್ಲಿ ಮಾಹಿತಿಯನ್ನು ಪಡೆದು ಏರ್ ಟಿಕೇಟ್ ಅನ್ನು ಒದಗಿಸುವಲ್ಲಿ ಕ್ರಮವಹಿಸತಕ್ಕದ್ದು.

ಈ ಮೇಲ್ಕಂಡ ವಿಶೇಷ ನ್ಯಾಯವಾದಿಗಳು ನಿಯಮಾನುಸಾರ ದಿನ ಭತ್ಯೆ ಹಾಗೂ ಪ್ರಯಾಣ ಭತ್ಯೆಗಳಿಗೆ ಅರ್ಹರಾಗಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಎಂ. ಜಯಮಣಿ)**
ಸರ್ಕಾರದ ಅಧೀನ ಕಾರ್ಯದರ್ಶಿ-2 (ಪ್ರ)
ಸಮಾಜ ಕಲ್ಯಾಣ ಇಲಾಖೆ

ಇವರಿಗೆ:

1) ಮಹಾಲೇಖಪಾಲರು (ಎ&ಇ, ಲೆಕ್ಕ ಪರಿಶೋಧನೆ-1 ಮತ್ತು 2), ಕರ್ನಾಟಕ, ಬೆಂಗಳೂರು.
2) ರೆಸಿಡೆಂಟ್ ಕಮೀಷನರ್, ಕರ್ನಾಟಕ ಭವನ, ನವದೆಹಲಿ-ಇವರಿಗೆ ಕಳುಹಿಸುತ್ತಾ, ಸದರಿ ಅಧಿಕಾರಿಗಳಿಗೆ ಕರ್ನಾಟಕ ಭವನ, ನವದೆಹಲಿ, ಇಲ್ಲಿ ದಿನಾಂಕ: 15-11-2013 ರಿಂದ 22-11-2013ರ ವರೆಗೆ ಒಂದು ಕೊಠಡಿಯನ್ನು ಕಾಯ್ದಿರಿಸಲು ಕೋರಲಾಗಿದೆ.
3) ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು,
4) ವ್ಯವಸ್ಥಾಪಕ ನಿರ್ದೇಶಕರು, ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಂಗಳೂರು (ಸದರಿ ವಿಶೇಷ ನ್ಯಾಯಾಧೀಶರು ಪ್ರಯಾಣಿಸಲು ತಕ್ಷಣವೇ ಸೂಕ್ತ ಕ್ರಮವಹಿಸತಕ್ಕದ್ದು)
5) ಶ್ರೀ ರಘುಪತಿ, ಅಡ್ವೊಕೇಟ್ ಆನ್ ರೆಕಾರ್ಡ್, ಭಾರತ ಸರ್ವೋಚ್ಚ ನ್ಯಾಯಾಲಯ, ನವದೆಹಲಿ,
6) ಸರ್ಕಾರದ ಅಧೀನ ಕಾರ್ಯದರ್ಶಿ, ಕರ್ನಾಟಕ ಭವನ, ನವದೆಹಲಿ.
7) ಶ್ರೀ ಸಿ. ಜಗದೀಶ್, ವಿಶೇಷ ನ್ಯಾಯವಾದಿಗಳು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು
8) ಶ್ರೀ ಶ್ರೀಮತಿ ಅನಿತಾ ವಿ. ಮಡ್ಲೂರ್, ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಆಯುಕ್ತರ ಕಛೇರಿ, ಬೆಂಗಳೂರು.